ದಿನಾಂಕ: 29.11.2021ರಂದು ಬೆಳ್ಳಿಗ್ಗೆ 10.30 ಗಂಟೆಗೆ ಶಿವನಗರ ವಾರ್ಡ್ ನಂ. 107 ರಲ್ಲಿ ನೋಡಲ್ ಅಧಿಕಾರಿಯವರಾದ **ಶ್ರೀ ಲಿಂಗಣ್ಣ ಗುಂಡಳ್ಳಿ,** ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳ ವಿವರ:-

**ಹಾಜರಿದ್ದ ಪಾಲಿಕೆಯ ಅಧಿಕಾರಿಗಳು ಹಾಗೂ ವಾರ್ಡ್ ಕಮಿಟಿ ಸದಸ್ಯರು:-**

1. ಶ್ರೀ ಪೂಜಾರಪ್ಪ, ಸಹಾಯಕ ಅಭಿಯಂತರರು, ವಾರ್ಡ್ ನಂ. 107 ಶಿವನಗರ [ಪ್ರಭಾರ]
2. ಶ್ರೀ ಆನಂದ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಬೆಸ್ಕಾಂ
3. ಶ್ರೀ ಶಿವರಾಮಯ್ಯ, ಹಿರಿಯ ಆರೋಗ್ಯ ಪರಿವೀಕ್ಷಕರು
4. ಶ್ರೀ ನಾಗರಾಜು, ಸಹಾಯಕ ಅಭಿಯಂತರರು
5. ಶ್ರೀ ಆರ್. ನರಸಿಂಹ, ವಾಟರ್ ನಿರೀಕ್ಷಕರು
6. ಶ್ರೀ ಅನಿಕೇಶ್, ಹಿರಿಯ ಆರೋಗ್ಯ ಪರಿವೀಕ್ಷರು;
7. ಶ್ರೀ ಕೇಶವಮೂರ್ತಿ, ಬಿ.ಜೆ.ಪಿ. ಉಪಾಧ್ಯಕ್ಷಕರು
8. ಶ್ರೀ ಆರ್. ಶ್ರೀನಿವಾಸ ನಾಯ್ಡು, ಸದಸ್ಯರು
9. ಶ್ರೀ ನಾಗರಾಜ್, ಅದ್ಯಕ್ಷರು
10. ಶ್ರೀ ಮಂಜುನಾಥಸ್ವಾಮಿ, ಉಪ ಅಧ್ಯಕ್ಷಕರು
11. ಶ್ರೀ ಸಂದೀಪ್.ಎಂ.
12. ಶ್ರೀ ಶಿವಕುಮಾರಯ್ಯ, ಹಿರಿಯ ಆರೋಗ್ಯ ಪರಿವೀಕ್ಷಕರು
13. ಶ್ರೀ ನಾಗರಾಜ್, ಸಹಾಯಕ ಅಭಿಯಂತರರು
14. ಶ್ರೀ ರಾಘವೇಂದ್ರ, ಪ್ರೆಸಿಡೆಂಟ್

ಶ್ರೀ ಪೂಜಾರಪ್ಪ, ಸಹಾಯಕ ಕಾರ್ಯದರ್ಶಿಗಳು ಹಾಗೂ ಸಂಚಾಲಕರು, ವಾರ್ಡ್ ನಂ. 107ರವರು ಸಭೆಗೆ ಆಗಮಿಸಿರುವ ಎಲ್ಲರಿಗೂ ಸ್ವಾಗತ ಕೋರುತ್ತಾ, ಈ ಕೆಳಗಿನ ಅಂಶಗಳನ್ನು ಸಭೆಯಲ್ಲಿ ಚರ್ಚಿಸಲಾಯಿತು.

1. ಸರ್ವಿಸ್ ರಸ್ತೆಯಲ್ಲಿ 4 ಮ್ಯಾನ್ ಹೋಲ್‌ಗಳು ಬ್ಲಾಕ್ ಆಗಿ ರಸ್ತೆಯ ಮೇಲೆ ನೀರು ಹರಿದು, ಅಲ್ಲಿ ಓಡಾಡುವ ಜನ ಸಾಮನ್ಯರಿಗೆ ತೊಂದರೆಯಾಗಿದೆ ಎಂದು ಸಾರ್ವಜನಿಕರು ಸಭೆಯಲ್ಲಿ ತಿಳ್ಸಿಸಿದರು. ಅದರಂತೆ ಸಭೆಯಲ್ಲಿ ಹಾಜರಿದ್ದ ಬಿಡ್ಬ್ಲ್ಯೂ.ಎಸ್.ಎಸ್.ಬಿ. ಅಭಿಯಂತರರಿಗೆ ತುರ್ತಾಗಿ ಕ್ರಮ ವಹಿಸುವಂತೆ ಸೂಚಿಸಲಾಯಿತು.

2. ಪ್ರಸ್ತುತ ಮಾನ್ಯ ಮುಖ್ಯ ಮಂತ್ರಿಗಳು ಇತ್ತೀಚೆಗೆ ಉಲ್ಬಣಗೊಳ್ಳುವ ಕರೋನಾಗೆ ಕೋವಿಡ್-19 ಮುನ್ನೆಚ್ಚರಿಕೆ ಕ್ರಮವಾಗಿ 2ನೇ ಡೋಸನ್ನು ತುರ್ತಾಗಿ ಜನಗಳಿಗೆ ವಿತರಣೆ ಮಾಡುವಂತೆ ಮಾನ್ಯ ಮುಖ್ಯ ಮಂತ್ರಿಗಳು ಕರ್ನಾಟಕ ಸರ್ಕಾರ ಮುನ್ನೆಚ್ಚರಿಕೆ ಕ್ರಮವನ್ನು ಯಾವ ಯಾವ ಹಂತದಲ್ಲಿ ಕ್ರಮ ತೆಗೆದುಕೊಳ್ಳಬೇಕು ಅಂತಹ ಕಾರ್ಯಕ್ರಮವನ್ನು ಜನಸಾಮಾನ್ಯರಿಗೆ ಪ್ರಚಾರ ಪಡಿಸಿ ತಿಳಿಸಿರುವಂತೆ ಅದಕ್ಕೆ ಸಭೆಯಲ್ಲಿ ನೋಡಲ್ ಅಧಿಕಾರಿಗಳ ಸಮಕ್ಷಮದಲ್ಲಿ ಮತ್ತು ಘನ ತ್ಯಾಜ್ಯ ನಿರ್ವಹಣೆಯ ಆಟೋ ಟಿಪ್ಪರ್ ಗಳಿಗೆ ಧ್ವನಿ ವರ್ಧಕ ಅಳವಡಿಸಿಕೊಂಡು ಪ್ರಚಾರ ಮಾಡುವಂತೆ ಸಭೆಯಲ್ಲಿ ಚರ್ಚಿಸಲಾಯಿತು. ಅದರಲ್ಲಿ ಇಲ್ಲಿಯವರೆಗೆ 49 ಡೆತ್ ಕೇಸ್ ಗಳಾಗಿದ್ದು, 25 ಡೆತ್ ಕೇಸನ್ನು ಅಂತರ್ ಜಾಲದಲ್ಲಿ ಅಪ್ ಲೋಡ ಮಾಡಲಾಗಿರುತ್ತದೆ. ಇನ್ನು 25 ಡೆತ್ ಕೇಸ್‌ಗಳನ್ನು ಎಮ್.ಓ.ಹೆಚ್. ಕಮ್ಯೂನಿಟಿ ನಾರ್ಮ್ಸ್ ಪ್ರಕಾರ ಅಪ್ ಲೋಡ್ ಮಾಡಲಾಗುತ್ತದೆ.

3. ಅರಣ್ಯ ಇಲಾಖೆಯ ಅಧಿಕಾರಿಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲವೆಂದು ಸಾರ್ವಜನಿಕರು ಒಕ್ಕರಲುನಿಂದ ಸಭೆಯಲ್ಲಿ ತಿಳಿಸಿರುತ್ತಾರೆ. ತುರ್ತಾಗಿ ಒಣ ಮರಗಳನ್ನು ತೆರವುಗೊಳಿಸಿ ಸಂಧರ್ಭಕ್ಕುನುಸಾರ ಮರಗಳ ಕೊಂಬೆಗಳನ್ನು ತುರ್ತಾಗಿ ಕಟಾವು ಮಾಡಲು ಸಭೆಯಲ್ಲಿ ಹಾಜರಿದ್ದ ಅರಣ್ಯ ಅಧಿಕಾರಿಗಳ ಪರಿವೀಕ್ಷಕರಿಗೆ ತಿಳಿಸಲಾಯಿತು.

ಪು.ತಿ.ನೋ.

Scanned by CamScanner

4. ಮಾನ್ಯ ಶ್ರೀ ಕೇಶವಮೂರ್ತಿ, ಬಿ.ಜೆ.ಪಿ. ಉಪಾಧ್ಯಕ್ಷರು ಸಭೆಗೆ 1ನೇ ಮುಖ್ಯ ರಸ್ತೆ, 1ನೇ ಅಡ್ಡ ರಸ್ತೆಯ ಮೇಲು ಸೇತುವೆ ಬಳಿ ತಾಂಡೋಪ ತಾಂಡವಾಗಿ ವಾಹನಗಳ ನಿಲುಗಡೆಯಾಗಿದ್ದು, ಜನಗಳು ಸಂಚರಿಸಲು ಬಹಳ ತೊಂದರೆಯಾಗಿದೆ ಎಂದು ಸಭೆಯಲ್ಲಿ ತಿಳಿಸಿದಾಗ ಸದರಿ ವಿಷಯದ ಬಗ್ಗೆ ಸಂಚಾರಿ ಪೋಲಿಸ್ ಠಾಣೆ ದೂರವಾಣಿ ಮುಖಾಂತರ ಪೋಲಿಸ್ ಅಧಿಕಾರಿಗಳಿಗೆ ಮಾಹಿತಿ ತಿಳಿಸಲಾಗಿದ್ದು, ತುರ್ತಾಗಿ ವಾಹನ ನಿಲುಗಡೆಯನ್ನು ತೆರವುಗೊಳಿಸುವಂತೆ ಕೋರಲಾಗಿದೆ. ಸದರಿ ವಿಷಯಕ್ಕೆ ಮಾನ್ಯ ನೋಡಲ್ ಅಧಿಕಾರಿಗಳು ಪೋಲಿಸ್ ಇಲಾಖೆಗೆ ಪತ್ರದ ಮೂಲಕ ಮತ್ತೊಮ್ಮೆ ತಿಳಿಸುವಂತೆ ಸೂಚಿಸಿರುತ್ತಾರೆ.

5. ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಪಾರ್ಕ್ ಪಕ್ಕದಲ್ಲಿರುವ ಬ್ಯಾಡ್‌ಮಿಟನ್ ಕೋರ್ಟನ್ನು ಬಿ.ಬಿ.ಎಂ.ಪಿ. ಯಿಂದ ನಿರ್ಮಾಣಗೊಳಿಸಿದ್ದು, ಸದರಿ ಜಾಗದಲ್ಲಿ ಬೆಸ್ಕಾಂಯಿಂದ ವಿದ್ಯುತನ್ನು ಸರಬರಾಜು ಮಾಡದೆ ಅನಧಿಕೃತವಾಗಿ ವಿದ್ಯುತ್ ಚಕ್ತಿ ಉಪಯೋಗಿಸುವುದನ್ನು ಸಭೆಯಲ್ಲಿ ಹಾಜರಿದ್ದ ವಿದ್ಯುತ್ ಎಇಇ ರವರಿಂದ ಆಕ್ಷೇಪಣೆ ವ್ಯಕ್ತ ಪಡಿಸಿರುವ ಹಿನ್ನಲೆಯಲ್ಲಿ ಸದರಿ ಸ್ವತ್ತಿನ ಬಗ್ಗೆ ಪೂರಕ ದಾಖಲೆಗಳನ್ನು ಒದಗಿಸುವಂತೆ ಹಾಜರಿದ್ದ ಕಂದಾಯ ಅಧಿಕಾರಿ ಇಲಾಖೆಯವರಿಗೆ ನಿರ್ದೇಶಿಸಲಾಗಿರುತ್ತದೆ.

6. ಮಹಾಗಣಪತಿನಗರ , ಮಂಜುನಾಥನಗರ, ಧೋಬಿಘಾಟ್, ಮತ್ತು 96ನೇ ಬಸ್ ನಿಲ್ದಾಣದ ಹತ್ತಿರ ರಸ್ತೆ ಗುಂಡಿ ಬಿದ್ದು, ಸಾರ್ವಜನಿಕರಿಗೆ ತೊಂದರೆಯಾಗಿದೆ ಎಂದು ಸಾರ್ವಜನಿಕರು ಸಭೆಯಲ್ಲಿ ಮನವಿ ಮಾಡಿದ್ದು, ಮನವಿಯ ಮೇರೆಗೆ ಹಾಲಿ ಬಿ.ಬಿ.ಎಂ.ಪಿ. ಕೇಂದ್ರ ಕಛೇರಿಯ ಸಂಚಾರಿ ಕೋಶಕ್ಕೆ ತುರ್ತಾಗಿ ರಸ್ತೆ ಗುಂಡಿ ಮುಚ್ಚಲು 198 ವಾರ್ಡ್‌ಗಳಿಗೆ ಮಾನ್ಯ ಘನ ಮುಖ್ಯ ಆಯುಕ್ತರು, ಸೂಚಿಸಿರುವ ಪ್ರಕಾರ ತುರ್ತಾಗಿ ಕೆಲಸ ನಿರ್ವಹಿಸುವಂತೆ ನಮ್ಮ ನೋಡಲ್ ಅಧಿಕಾರಿಗಳು ಸಭೆಯಲ್ಲಿಯೇ ದೂರವಾಣಿ ಮುಖಂತರ ಟ್ರಾಫಿಕ್ ಸೆಲ್ ಅಭಿಯಂತರರಾದ ಶ್ರೀ ಮಹೇಶ್ ರವರಿಗೆ ಚರ್ಚಿಸಿ, ಇನ್ನು 15 ದಿನಗಳೊಳಗಾಗಿ ಕೆಲಸ ಪ್ರಾರಂಭಿಸುತ್ತೇವೆ ಎಂದು ತಿಳಿಸಿರುವುದರಿಂದ ಸದರಿ ಕೆಲಸವನ್ನು ತುರ್ತಾಗಿ ನಿರ್ವಹಣೆ ಮಾಡುವಂತೆ ಸೂಚಿಸಿರುತ್ತೇವೆ.

ಎಲ್ಲಾ ಇಲಾಖೆಗಳಿಗೆ ಸಂಬಂಧಿಸಿದಂತೆ ಸಭೆಯಲ್ಲಿ ತಿಳಿಸುವ ದೂರುಗಳನ್ನು ಸರಿಪಡಿಸಿ, ಮುಂದಿನ ಸಭೆಯಲ್ಲಿ ವರದಿಯನ್ನು ನೀಡುವಂತೆ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ
ವಾರ್ಡ್ ಸಮಿತಿ
ವಾರ್ಡ್ ನಂ. 107

ಸಹಿ/-
ಶ್ರೀ ಲಿಂಗಣ್ಣ ಗುಂಡಳ್ಳಿ
ನೋಡಲ್ ಅಧಿಕಾರಿಗಳು

Scanned by CamScanner